ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಹಿಮವತ್ ಗೋಪಾಲಸ್ವಾಮಿ ಬೆಟ್ಟ

ಹಿಮವತ್ ಗೋಪಾಲಸ್ವಾಮಿ ಬೆಟ್ಟ. ದಕ್ಷಿಣದ ಗೋವರ್ಧನಗಿರಿ. ನೀಲಾದ್ರಿ, ಮಂಗಳಾದ್ರಿ, ಗರುಡಾದ್ರಿ ಮುಂತಾದ ಗಿರಿಗಳು ಕಮಲಾಕಾರದ ಅಷ್ಟದಳದಂತೆ ಹಬ್ಬಿರುವ ಕಮಲಾಚಲ.










ಸಂತಾನ ಭಾಗ್ಯ ಪ್ರಸಾದಿಸುವ ತೊಟ್ಲು ತೀರ್ಥ, ಪಾಪಗಳಿಂದ ವಿಮುಕ್ತಿಗೊಳಿಸುವ ಪಾಪನಾಶಿನಿ ತೀರ್ಥ, ಕಾಗೆಗಳನ್ನು ಹಂಸಗಳನ್ನಾಗಿ ಪರಿವರ್ತಿಸುವ ಹಂಸತೀರ್ಥ ಮುಂತಾದ ವೈಶಿಷ್ಟ್ಯಮಯ ಅನೇಕ ತೀರ್ಥಗಳಿರುವ ಮಹಿಮಾನ್ವಿತ ಪರ್ವತ. ಎಲ್ಲೆಲ್ಲೂ ಹಸಿರು. ತಂಪಾದ ಗಾಳಿ. ಮನಸ್ಸಿಗೆ ಮುದ ನೀಡುವ ಮಂಜು ಮುಸುಕಿದ ಸ್ವರ್ಗ ಸುಂದರ ತಾಣ. ಸ್ವಲ್ಪ ದೂರದಲ್ಲಿ ಕಾಣುತ್ತಿರುವ ಹಿಮವತ್ ಗೋಪಾಲಸ್ವಾಮಿ ದೇವಸ್ಥಾನ. ಪ್ರವೇಶ ದ್ವಾರದಮೇಲೆ ನೃತ್ಯ ಭಂಗಿಯಲ್ಲಿರುವ ಮುದ್ದು ಕೃಷ್ಣ.

ಪಿಳ್ಳಂಗೋವಿಯ ಚೆಲುವ ಕೃಷ್ಣನ ಎಲ್ಲಿ ನೋಡಿದಿರಿ ರಂಗನ ಎಲ್ಲಿ ನೋಡಿದಿರಿ
ಎಲ್ಲಿ ನೋಡಿದರಲ್ಲಿ ತಾನಿಲ್ಲ ದಿಲ್ಲವೆಂದು ಬಲ್ಲ ಜಾಣರೆ
ನಂದಗೋಪನ ಮಂದಿರಗಳ ಸಂದುಗೊಂದಿನಲಿ
ಚಂದ ಚಂದದ ಗೋಪ ಬಾಲರ ವೃಂದ ವೃಂದದಲಿ
ಸುಂದರಾಂಗದ ಸುಂದರೀಯರ ಹಿಂದು ಮುಂದಿನಲಿ
ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ



ಸಾಕ್ಷಾತ್ ಬೃಂದಾವನ ಅನಿಸುವಷ್ಟು ಆಹ್ಲಾದವಾದ ಸ್ವಚ್ಛ ಪ್ರಕೃತಿ. ಮೋಡಗಳ ಮಧ್ಯೆ ಕಾಣುತ್ತಿರುವ ಮೇಘಶ್ಯಾಮನ ದೇವಾಲಯ. ದೂರದಲ್ಲಿರುವ ಜಲತೀರ್ಥಗಳು. ಅದರ ಸಮೀಪದಲ್ಲಿ ಸಂಚರಿಸುತ್ತಿರುವ ಆನೆಗಳು. ಅಂಗಡಿ, ವ್ಯಾಪಾರ, ಜಂಝೂಟ ಇಲ್ಲದೇ ಶಾಂತವಾಗಿರುವ, “ಪವಿತ್ರವಾಗಿರುವ ಸಾಮೀಪ್ಯ ಸಪ್ತರ್ಷಿಗಳ ಅಗೋಚರ ಸಂಚಾರ” ಎಂಬ ಅನುಭವ ನುಡಿಗೆ ಸ್ಪಷ್ಟೀಕರಣ. ಗೋವರ್ಧನ ಗಿರಿಯಲ್ಲಿ ಸರ್ವರನ್ನೂ ಪ್ರಚಂಡ ಮಾರುತದಿಂದ ಪಾರುಮಾಡಿದ ಗೋವಿಂದನು ಇಲ್ಲೂ ನಮಗೆ ರಕ್ಷಣೆ ಕೊಡುತ್ತಾ ಇರುವ ಭರವಸೆಯ ಭಾವನೆ.

ಗೋವರ್ಧನ ಗಿರಿಧರ ಗೋವಿಂದ ಗೋಕುಲಪಾಲಕ ಪರಮಾನಂದ|

ಶ್ರೀವತ್ಸಾಂಕಿತ ಶ್ರೀಕೌಸ್ತುಭಧರ ಭಾವಕ ಭಯಹರ ಪಾಹಿ ಮುಕುಂದ||

ಆನಂದಾಮೃತವಾರಿಧಿ ಖೇಲ ಅಲಘು ಪರಾಕ್ರಮ ಅನುಪಮಶೀಲ|

ಶ್ರೀನಂದಾತ್ಮಜ ಶ್ರಿತಜನಪಾಲ ಶ್ರೀಕರ ಶ್ರಿತಲಯ ಲಾಲನಲೋಲ||

ಪಾಳೇಗಾರನಿಗೆ ಅವನ ಕೆಟ್ಟ ಚಟಗಳಿಂದ ಬಿಡಿಸಿ, ಉತ್ತಮ ಸಂತಾನ ಭಾಗ್ಯವನ್ನು ದಯಪಾಲಿಸಿದ ಸಂತಾನ ಗೋಪಾಲಸ್ವಾಮಿಯ ಸ್ಥಳಮಹಾತ್ಮೆಯನ್ನು ನೆನೆಯುತ್ತಾ ದೇವಾಲಯದ ದ್ವಾರದ ಹತ್ತಿರ ಬಂದ ತಕ್ಷಣ, ಎದುರಿಗೆ ಭವ್ಯವಾದ ಧ್ವಜಸ್ತಂಭ. ಪಕ್ಕದಲ್ಲಿ ಕೃಷ್ಣನಿಗೆ ಪ್ರಿಯವಾದ ತುಳಸಿ.

ಪ್ರಸೀದ ತುಳಸೀದೇವಿ ಪ್ರಸೀದ ಹರಿವಲ್ಲಭೇ।

ಕ್ಷೀರೋದಮಥನೋದ್ಭೂತೇ ತುಲಸೀ ತ್ವಾಂ ನಮಾಮ್ಯಹಮ್॥

ತುಲಸೀ ಶ್ರೀ ಸಖೀ ಶುಭೇ ಪಾಪಹಾರಿಣಿ ಪುಣ್ಯದೇ।

ನಮಸ್ತೇ ನಾರದನುತೇ ನಾರಾಯಣ ಮನಃಪ್ರಿಯೇ॥

ಪಕ್ಕದಲ್ಲಿ ದಾಸೋಹ. ಅನ್ನ, ಹುಳಿ, ಪಾಯಸಗಳ ಘಮ ಘಮ. ನಂದಗೋಕುಲದಲ್ಲಿ ಯಶೋದೆ, ನಂದಗೋಪಾಲರ ಆತಿಥ್ಯ ಸ್ವೀಕರಿಸುತ್ತಿರುವ ಅನುಭವ.



ವಸುದೇವ ಸುತಂ ದೇವಂ ಕಂಸ ಚಾಣೂರ ಮರ್ದನಮ್।

ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್॥

ಛಾಯಾಯಾಂ ಪಾರಿಜಾತಸ್ಯ ಹೇಮಸಿಂಹಾಸನೋಪರಿ।

ಆಸೀನಮಂಬುಜಶ್ಯಾಮ ಮಾಯತಾಕ್ಷಮಲಂಕೃತಮ್॥

ಎಂದು ಪ್ರಾರ್ಥಿಸುತ್ತಾ ಮುಖಮಂಟಪದ ಹತ್ತಿರ ಬರುತ್ತಿರುವಾಗ ದ್ವಾರದ ಮೇಲೆ ಜಿನುಗುತ್ತಿರುವ ಹಿಮದ ದರ್ಶನ. ಸಂಸಾರ ಸಾಗರದ ತಾಪದಿಂದ ಬೆಂದ ನೊಂದ ಮನಸ್ಸಿನ ಕ್ಲೇಶಗಳೆಲ್ಲಾ ಸ್ವಾಮಿಯ ಚರಣಾರವಿಂದಗಳಲ್ಲಿ ಲೀನವಾಗಿ ಮಾಯವಾದ ಹಿತವಾದ ಅನುಭವ. ಒಂದೇ ಕೃಷ್ಣ ಶಿಲೆಯಲ್ಲಿ ರುಕ್ಮಿಣೀ, ಸತ್ಯಭಾಮೆ, ಗೋವುಗಳು, ಗೋಪಿಕಾ ಸ್ತ್ರೀಯರು, ಗೋಪಾಲಕರು, ಸ್ನೇಹಿತರ ಸಹಿತ ಸುರಹೊನ್ನೆ ವೃಕ್ಷದಡಿಯಲ್ಲಿರುವ

ಅಪರೂಪದ ತ್ರಿಭಂಗಿಯಲ್ಲಿರುವ ಪರಮಾತ್ಮನ ಮೂರ್ತಿ. ಸಾಕ್ಷಾತ್ ಅಗಸ್ತ್ಯ ಮಹಾಋಷಿಗಳಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ದಿವ್ಯ ಮಂಗಳ ಸುಂದರ ಮೂರ್ತಿ. ಗೊಲ್ಲರನ್ನೂ ಗೋಪಿಕಾ ಸ್ತ್ರೀಯರನ್ನೂ ನೋಡಿದಾಗ ನಾವೂ ಅವನ ಸಖರಾಗಿ ಪರಮಾತ್ಮನ ಸಾನ್ನಿಧ್ಯದಲ್ಲಿ ಸುಖಿಸುತ್ತಿರುವ ಅದ್ವಿತೀಯ ಕಲ್ಪನೆ. ಭವ್ಯವಾಗಿರುವ ಬೆಳ್ಳಿಯ ಕಿರೀಟ, ಊರ್ಧ್ವ ಪುಂಡ್ರ ತಿಲಕ, ಕರುಣಾಪೂರಿತವಾಗಿ ನಿನಗೆ ನಾನಿದ್ದೇನೆ ಎಂದು ಅಭಯ ನೀಡುತ್ತಿರುವ ಹೊಳೆಯುತ್ತಿರುವ ವಿಶಾಲ ಕಂಗಳು, ಸುಂದರ ನಾಸಿಕ, ನಮಗೆ ಆಶೀರ್ವಾದ ನೀಡುತ್ತಿರುವ ಮಂದಸ್ಮಿತ ತುಟಿಗಳು, ದುಂಡುಗಲ್ಲ, ಕಂಕಣಗಳಿಂದ ಅಲಂಕೃತವಾಗಿರುವ ಕೈಗಳಲ್ಲಿ ಮಧುರನಾದದ ವೇಣುವು, ತ್ರಿಭಂಗಿಯಲ್ಲಿರುವ ಬೆಳ್ಳಿಯ ಕವಚದಿಂದ ಅಲಂಕೃತವಾಗಿರುವ ಅಸಾಧಾರಣ ಕೃಷ್ಣನ ವಿಗ್ರಹ, ಇಬ್ಬದಿಯಲ್ಲಿ ಸುಂದರ ಸಾಲಂಕೃತ ರುಕ್ಮಿಣೀ ಸತ್ಯಭಾಮೆಯರು.

ಅಧರಂ ಮಧುರಂ ವದನಂ ಮಧುರಂ ನಯನಂ ಮಧುರಂ ಹಸಿತಂ ಮಧುರಮ್ |
ಹೃದಯಂ ಮಧುರಂ ಗಮನಂ ಮಧುರಂ ಮಧುರಾಧಿಪತೇರಖಿಲಂ ಮಧುರಮ್ ||
ವೇಣುರ್ಮಧುರೋ ರೇಣುರ್ಮಧುರ ಪಾಣಿರ್ಮಧುರಃ ಪಾದೌ ಮಧುರೌ।
ನೃತ್ಯಂ ಮಧುರಂ ಸಖ್ಯಂ ಮಧುರಂ ಮಧುರಾಧಿಪತೇರಖಿಲಂ ಮಧುರಮ್ ||
ವಚನಂ ಮಧುರಂ ಚರಿತಂ ಮಧುರಂ ವಸನಂ ಮಧುರಂ ವಲಿತಂ ಮಧುರಮ್ |
ಚಲಿತಂ ಮಧುರಂ ಭ್ರಮಿತಂ ಮಧುರಂ ಮಧುರಾಧಿಪತೇರಖಿಲಂ ಮಧುರಮ್ ||

ನಂದಕಿಶೋರ, ಯಶೋಮತಿ ಪುತ್ರ, ರುಕ್ಮಿಣೀಲೋಲ, ಸತ್ಯಭಾಮಾಪ್ರಿಯ, ಗೋಪನಾಯಕ, ನಂದಗೋಪಾಲ, ಅಮೃತಾನಂದಮಯ, ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ, ಜಗನ್ನಾಟಕ ಸೂತ್ರಧಾರಿ, ಪರಂಜ್ಯೋತಿಸ್ವರೂಪ, ಪರಮಪುರುಷ, ಪರಾತ್ಪರ, ತ್ರಿಗುಣಾತೀತ, ಮಂದಸ್ಮಿತ ವದನಾರವಿಂದನಾದ ಶ್ರೀಕೃಷ್ಣಪರಮಾತ್ಮನ ಕಮಲಗಳನ್ನೂ ಮೀರಿದ ಪದದ್ವಂದಗಳಿಗೆ ನಮನ. ಪಕ್ಕದಲ್ಲಿ ಸುಂದರ ತೊಟ್ಟಿಲು. ಅದರಲ್ಲಿ ನಯನಾನಂದಕರವಾಗಿರುವ ವಟಪತ್ರಶಾಯಿ.

ವಟಪತ್ರಶಾಯಿಕಿ ವರಹಾಲ ಲಾಲಿ ರಾಜೀವ ನೇತ್ರುನಿಕಿ ರತನಾಲ ಲಾಲಿ
ಮುರಿಪಾಲ ಕೃಷ್ಣುನಿಕಿ ಮುತ್ಯಾಲ ಲಾಲಿ ಜಗಮೇಲು ಸ್ವಾಮಿಕಿ ಸಾಲಿಗ್ರಾಮಾಲ ಲಾಲಿ.

ಅವನ ಮುಂದೆ ಪರಮಪಾವನವಾದ ದೈವಶಕ್ತಿಯಿಂದ ಸಂಯೋಜಿತವಾದ, ಅರಿಶಿನ, ಕುಂಕುಮ, ತುಲಸೀ, ಪುಷ್ಪಗಳಿಂದ ಪೂಜಿಸಲ್ಪಟ್ಟ ಅನೇಕ ಸಾಲಿಗ್ರಾಮಗಳು. ಅರ್ಚಕರು ಪ್ರೋಕ್ಷಿಸಿದ ಪವಿತ್ರ ತೀರ್ಥದಲ್ಲಿ ಮಿಂದು ಪುನೀತರಾದ ಭಾವನೆ.

ಅಕಾಲಮೃತ್ಯುಹರಣಂ ಸರ್ವವ್ಯಾಧಿನಿವಾರಣಂ। ಶ್ರೀ ಜಗನ್ನಾಥ ಪಾದೋದಕಂ ಪಾವನಂ ಶುಭಂ॥

ಪರಮ ಪಾವನವಾದ ಪರಮೇಶ್ವರ ಪಾದೋದಕ ತೀರ್ಥದ ಸೇವನೆ. ದಶಾವತಾರಗಳ ಕೆತ್ತನೆ ಇರುವ ಗರ್ಭಗುಡಿಗೆ ಪ್ರದಕ್ಷಿಣೆ. ಅರ್ಚಕರು ನಮ್ಮ ಕೈಗಳಿಗೆ ಮುದ್ದು ಬಾಲಕೃಷ್ಣನನ್ನು ಕೊಟ್ಟು, ಜಪದ ಮಧ್ಯದಲ್ಲಿ ಕೃಷ್ಣ ಭಾರವಾದಂತೆ ಭಾಸವಾಗಬಹುದು ಎಂಬ ಸೂಚನೆ ಕೊಟ್ಟಾಗ, ತೃಣಾವರ್ತನ ಸಂಹಾರದ ಘಟ್ಟದಲ್ಲಿ ಕೃಷ್ಣನನ್ನು ಮಡಿಲಲ್ಲಿ ಇಟ್ಟುಕೊಂಡು ಲಾಲಿಸುತ್ತಿದ್ದ ಯಶೋದೆಗೆ ಮಗು ಇದ್ದಕ್ಕಿದ್ದಂತೆ ಬೆಟ್ಟದಂತೆ ಭಾರವಾದ ಲೀಲೆ ಭಾಸವಾಗಿ,

ಜೋ ಜೋ ಕಮಲದಳೇಕ್ಷಣ। ಜೋ ಜೋ ಮೃಗರಾಜಮಧ್ಯ। ಜೋ ಜೋ ಕೃಷ್ಣಾ।

ಜೋ ಜೋ ಪಲ್ಲವಕರಪದ। ಜೋ ಜೋ ಪೂರ್ಣೇಂದುವದನ। ಜೋ ಜೋ ಕೃಷ್ಣಾ।

ಎಂದು ಮುದ್ದು ಕೃಷ್ಣನಿಗೆ ಲಾಲಿ ಮನದ ಗಾಯನ. ಅರ್ಚಕರಿಂದ ಶ್ರೀಸುದರ್ಶನ ಮಹಾಮಂತ್ರದ ಜಪ.

ಓಂ ಶ್ರೀಂ ಹ್ರೀಂ ಕ್ಲೀಂ ಶ್ರೀ ಕೃಷ್ಣಾಯ ಗೋವಿಂದಾಯ ಗೋಪಿಜನ ವಲ್ಲಭಾಯ , ಪರಾಯ ಪರಮ ಪುರುಷಾಯ ಪರಮಾತ್ಮನೇ , ಪರಕರ್ಮ ಮಂತ್ರ ಯಂತ್ರ ತಂತ್ರ , ಔಷಧ ವಿಷ ಅಭಿಚಾರ ಅಸ್ತ್ರ ಶಸ್ತ್ರಾಣಿ ಸಂಹಾರ ಸಂಹಾರ , ಮೃತ್ಯೋೀರ ಮೋಚಯ ಮೋಚಯ , ಆಯುರ ವರ್ಧಾಯ ವರ್ಧಾಯ ಶತ್ರೂನ ನಾಶಯ ನಾಶಯ , ಓಂ ನಮೋ ಭಗವತೇ ಮಹಾ ಸುದರ್ಶನಾಯ

[ ಓಂ ಪ್ರೋಂ ರೀಂ ರಂ ದೀಪ್ತ್ರೇ ಜ್ವಾಲಾ ಪರಿತಾಯ ಸರ್ವಧಿಕ್ಷೋಭಣ ಕರಾಯ ,

ಹೂಂಫಟ್ ಪರಬ್ರಹ್ಮಣೇ ಪರಂಜ್ಯೋತೀಷೇ ಸ್ವಾಹಾ || ]

, ಓಂ ನಮೋ ಭಗವತೇ ಸುದರ್ಶನಾಯ, ಓಂ ನಮೋ ಭಗವತೇ ಮಹಾ ಸುದರ್ಶನಾಯ॥

ಮಹಾ ಚಕ್ರಯಾ ಮಹಾಜ್ವಾಲಯಾ ಸರ್ವರೋಗ ಪ್ರಶಮನಾಯ ಕರ್ಮಬಂಧ ವಿಮೋಚನಾಯ ಪಾದಾದಿಮಾಸ್ತ್ಯ ಪರ್ಯಂತಂ ವಾತ ಜನಿತ ರೋಗಾನ್ ಪಿತ್ಥಾ ಜನಿತ ರೋಗಾನ್ ಶ್ಲೇಷ್ಮ ಜನಿತ ರೋಗಾನ್ ಧಾತುಸಂಗಲಿಗೋದ್ಭವ ನಾನಾ ವಿಕಾರ ರೋಗಾನ್ ನಾಶಯ ನಾಶಯ ಪ್ರಶಮಯ ಪ್ರಶಮಯ ಆರೋಗ್ಯಂ ದೇಹಿ ದೇಹಿ ಓಂ ಸಹಸ್ರಾರ ಹುಂ ಫಟ್ ಸ್ವಾಹಾ।।

ಜಪದ ಪವಿತ್ರಶಕ್ತಿಯಿಂದ ಪುನೀತರಾಗಿ ಒಲ್ಲದ ಮನಸ್ಸಿನಿಂದ ಅವರಿಗೆ ಕೃಷ್ಣನನ್ನು ಕೊಟ್ಟು, ಅವರು ಕೃಷ್ಣನ ಪಾದಾರವಿಂದಗಳನ್ನು ನಮ್ಮ ತಲೆಯ ಮೇಲೆ ಇಟ್ಟು ಆಶೀರ್ವಾದ ಮಾಡಿದಾಗ ಧನ್ಯತೆಯ ಆನಂದ. ಜಗತ್ಪೂಜ್ಯರಾದ ಬ್ರಹ್ಮ, ಶಿವ ಮುಂತಾದ ದೇವತೆಗಳಿಂದ ನಮಸ್ಕರಿಸಲ್ಪಡುವಂತಹ, ಪೂತನಿಯ ಸಂಹಾರ ಮಾಡಿದ ಪವಿತ್ರ ಪಾದಗಳು ನಮ್ಮ ಶಿರವನ್ನು ಸ್ಪರ್ಶಿಸಿದ ತಕ್ಷಣ ಧನ್ಯತೆಯ ಭಾವದಿಂದ ಕ್ಲೇಶಗಳಿಂದ ಬಿಡುಗಡೆ ಹೊಂದಿದ ಸಂತೃಪ್ತಿಯ ಸಮಾಧಾನ. ಗಜೇಂದ್ರನನ್ನು ಮೊಸಳೆಯಿಂದ ರಕ್ಷಿಸಿದ ಮಹಾಸುದರ್ಶನ ಚಕ್ರ ನಮ್ಮ ರಕ್ಷಣೆಗೆ ಬಂದಂತ ದಿವ್ಯ ಅನುಭೂತಿ.

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ।
ಪ್ರಣತ ಕ್ಲೇಶನಾಶಾಯ ಗೋವಿಂದಾಯ ನಮೋ ನಮಃ॥

ನಂದಗೋಕುಲದಲ್ಲಿ ಕೃಷ್ಣನ ಜನ್ಮೋತ್ಸವವನ್ನು ಸಂಭ್ರಮದಿಂದ ಆಚರಿಸಿದ ಕಲ್ಪನೆಯ ಸಂತೋಷ. ಅರ್ಚಕರಿಂದ ದಂಡ ಸ್ಪರ್ಶ. ಬುದ್ಧಿಯನ್ನು ಆ ಭಗವಂತನಲ್ಲೇ ಲಗ್ನ ಮಾಡುವ ಶಕ್ತಿಯನ್ನು ದಯಪಾಲಿಸೆಂಬ ಬೇಡಿಕೆ.

"ಬೃಂದಾವನ ಸಂಚಾರೀ ಗೋವರ್ಧನೋದ್ಧಾರೀ ಗೋಪಾಲಕೃಷ್ಣ ಮುರಾರೀ"
ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್ |
ದೇವಕೀಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ || ೧ ||
ಅತಸೀಪುಷ್ಪಸಂಕಾಶಂ ಹಾರನೂಪುರಶೋಭಿತಮ್ |
ರತ್ನಕಂಕಣಕೇಯೂರಂ ಕೃಷ್ಣಂ ವಂದೇ ಜಗದ್ಗುರುಮ್ || ೨ ||
ಕುಟಿಲಾಲಕಸಂಯುಕ್ತಂ ಪೂರ್ಣಚಂದ್ರನಿಭಾನನಮ್ |
ವಿಲಸತ್ಕುಂಡಲಧರಂ ಕೃಷ್ಣಂ ವಂದೇ ಜಗದ್ಗುರುಮ್ || ೩ ||
ಮಂದಾರಗಂಧಸಂಯುಕ್ತಂ ಚಾರುಹಾಸಂ ಚತುರ್ಭುಜಮ್ |
ಬರ್ಹಿಪಿಂಛಾವಚೂಡಾಂಗಂ ಕೃಷ್ಣಂ ವಂದೇ ಜಗದ್ಗುರುಮ್ || ೪ ||
ಉತ್ಫುಲ್ಲಪದ್ಮಪತ್ರಾಕ್ಷಂ ನೀಲಜೀಮೂತಸನ್ನಿಭಮ್ |
ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಮ್ || ೫ ||
ರುಕ್ಮಿಣೀಕೇಳಿಸಂಯುಕ್ತಂ ಪೀತಾಂಬರಸುಶೋಭಿತಮ್ |
ಅವಾಪ್ತತುಲಸೀಗಂಧಂ ಕೃಷ್ಣಂ ವಂದೇ ಜಗದ್ಗುರುಮ್ || ೬ ||

ಗೋಪಿಕಾನಾಂ ಕುಚದ್ವಂದ್ವಕುಂಕುಮಾಂಕಿತವಕ್ಷಸಮ್ |
ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಮ್ || ೭ ||
ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾವಿರಾಜಿತಮ್ |
ಶಂಖಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಮ್ || ೮ ||

ನಾರಾಯಣ ನಾರಾಯಣ ಜಯ ಗೋವಿಂದ ಹರೇ ॥
ನಾರಾಯಣ ನಾರಾಯಣ ಜಯ ಗೋಪಾಲ ಹರೇ ॥
ಕರುಣಾಪಾರಾವಾರ ವರುಣಾಲಯಗಂಭೀರ ನಾರಾಯಣ ॥ **1** ॥
ಘನನೀರದಸಂಕಾಶ ಕೃತಕಲಿಕಲ್ಮಷನಾಶನ ನಾರಾಯಣ ॥ **2** ॥
ಯಮುನಾತೀರವಿಹಾರ ಧೃತಕೌಸ್ತುಭಮಣಿಹಾರ ನಾರಾಯಣ ॥ **3** ॥
ಪೀತಾಂಬರಪರಿಧಾನ ಸುರಕಳ್ಯಾಣನಿಧಾನ ನಾರಾಯಣ ॥ **4** ॥
ಮಂಜುಲಗುಂಜಾಭೂಷ ಮಾಯಾಮಾನುಷವೇಷ ನಾರಾಯಣ ॥ **5** ॥
ರಾಧಾಧರಮಧುರಸಿಕ ರಜನೀಕರಕುಲತಿಲಕ ನಾರಾಯಣ ॥ **6** ॥
ಮುರಳೀಗಾನವಿನೋದ ವೇದಸ್ತುತಭೂಪಾದ ನಾರಾಯಣ ॥ **7** ॥
ಬರ್ಹಿನಿಬರ್ಹಾಪೀಡ ನಟನಾಟಕಫಣಿಕ್ರೀಡ ನಾರಾಯಣ ॥ **8** ॥
ವಾರಿಜಭೂಷಾಭರಣ ರಾಜೀವರುಕ್ಮಿಣೀರಮಣ ನಾರಾಯಣ ॥ **9** ॥
ಜಲರುಹದಳನಿಭನೇತ್ರ ಜಗದಾರಂಭಕಸೂತ್ರ ನಾರಾಯಣ ॥ **10** ॥
ಪಾತಕರಜನೀಸಂಹಾರ ಕರುಣಾಲಯ ಮಾಮುದ್ಧರ ನಾರಾಯಣ ॥ **11** ॥
ಅಘ ಬಕಹಯಕಂಸಾರೇ ಕೇಶವ ಕೃಷ್ಣ ಮುರಾರೇ ನಾರಾಯಣ ॥ **12** ॥
ಹಾಟಕನಿಭಪೀತಾಂಬರ ಅಭಯಂ ಕುರು ಮೇ ಮಾವರ ನಾರಾಯಣ ॥ **13** ॥
ದಶರಥರಾಜಕುಮಾರ ದಾನವಮದಸಂಹಾರ ನಾರಾಯಣ ॥ **14** ॥
ಗೋವರ್ಧನಗಿರಿ ರಮಣ ಗೋಪೀಮಾನಸಹರಣ ನಾರಾಯಣ ॥ **15** ॥
ಸರಯುತೀರವಿಹಾರ ಸಜ್ಜನಋಷಿಮಂದಾರ ನಾರಾಯಣ ॥ **16** ॥
ವಿಶ್ವಾಮಿತ್ರಮಖತ್ರ ವಿವಿಧವರಾನುಚರಿತ್ರ ನಾರಾಯಣ ॥ **17** ॥
ಧ್ವಜವಜ್ರಾಂಕುಶಪಾದ ಧರಣೀಸುತಸಹಮೋದ ನಾರಾಯಣ ॥ **18** ॥

ಜನಕಸುತಾಪ್ರತಿಪಾಲ ಜಯ ಜಯ ಸಂಸ್ಮೃತಿಲೀಲ ನಾರಾಯಣ ॥ **19** ॥

ದಶರಥವಾಗ್ಧೃತಿಭಾರ ದಂಡಕ ವನಸಂಚಾರ ನಾರಾಯಣ ॥ **20** ॥

ಮುಷ್ಟಿಕಚಾಣೂರಸಂಹಾರ ಮುನಿಮಾನಸವಿಹಾರ ನಾರಾಯಣ ॥ **21** ॥

ವಾಲಿವಿನಿಗ್ರಹಶೌರ್ಯ ವರಸುಗ್ರೀವಹಿತಾರ್ಯ ನಾರಾಯಣ ॥ **22** ॥

ಮಾಂ ಮುರಳೀಕರ ಧೀವರ ಪಾಲಯ ಪಾಲಯ ಶ್ರೀಧರ ನಾರಾಯಣ ॥ **23** ॥

ಜಲನಿಧಿ ಬಂಧನ ಧೀರ ರಾವಣಕಂಠವಿದಾರ ನಾರಾಯಣ ॥ **24** ॥

ತಾಟಕಮರ್ದನ ರಾಮ ನಟಗುಣವಿವಿಧ ಸುರಾಮ ನಾರಾಯಣ ॥ **25** ॥

ಗೌತಮಪತ್ನೀಪೂಜನ ಕರುಣಾಘನಾವಲೋಕನ ನಾರಾಯಣ ॥ **26** ॥

ಸಂಭ್ರಮಸೀತಾಹಾರ ಸಾಕೇತಪುರವಿಹಾರ ನಾರಾಯಣ ॥ **27** ॥

ಅಚಲೋದ್ಧೃತಚಂಚತ್ಕರ ಭಕ್ತಾನುಗ್ರಹತತ್ಪರ ನಾರಾಯಣ ॥ **28** ॥

ನೈಗಮಗಾನವಿನೋದ ರಕ್ಷಿತ ಸುಪ್ರಹ್ಲಾದ ನಾರಾಯಣ ॥ **29** ॥

ಭಾರತ ಯತವರಶಂಕರ ನಾಮಾಮೃತಮಖಿಲಾಂತರ ನಾರಾಯಣ ॥ **30** ॥

ಜಯ ಜನಾರ್ದನಾ ಕೃಷ್ಣಾ ರಾಧಿಕಾಪತೇ ಜನವಿಮೋಚನಾ ಕೃಷ್ಣಾ ಜನ್ಮಮೋಚನಾ
ಗರುಡವಾಹನಾ ಕೃಷ್ಣಾ ಗೋಪಿಕಾಪತೇ ನಯನಮೋಹನಾ ಕೃಷ್ಣಾ ನೀರಜೇಕ್ಷಣಾ ||
ಸುಜನಬಾಂಧವಾ ಕೃಷ್ಣಾ ಸುಂದರಾಕೃತೇ ಮದನಕೋಮಲಾ ಕೃಷ್ಣಾ ಮಾಧವಾ ಹರೇ
ವಸುಮತೀಪತೇ ಕೃಷ್ಣಾ ವಾಸವಾನುಜಾ ವರಗುಣಾಕರಾ ಕೃಷ್ಣಾ ವೈಷ್ಣವಾಕೃತೇ ||
ಸುರುಚಿನಾನನಾ ಕೃಷ್ಣಾ ಶೌರ್ಯವಾರಿಧೇ ಮುರಹರಾ ವಿಭೋ ಕೃಷ್ಣಾ ಮುಕ್ತಿದಾಯಕಾ
ವಿಮಲಪಾಲಕಾ ಕೃಷ್ಣಾ ವಲ್ಲಭೀಪತೇ ಕಮಲಲೋಚನಾ ಕೃಷ್ಣಾ ಕಾಮ್ಯದಾಯಕಾ ||
ವಿಮಲಗಾತ್ರನೇ ಕೃಷ್ಣಾ ಭಕ್ತವತ್ಸಲಾ ಚರಣಪಲ್ಲವಂ ಕೃಷ್ಣಾ ಕರುಣಕೋಮಲಂ
ಕುವಲಯೇಕ್ಷಣಾ ಕೃಷ್ಣಾ ಕೋಮಲಾಕೃತೇ ತವ ಪದಾಂಬುಜಂ ಕೃಷ್ಣಾ ಶರಣಮಾಶ್ರಯೇ ||
ಭುವನನಾಯಕಾ ಕೃಷ್ಣಾ ಪಾವನಾಕೃತೇ ಗುಣಗಣೋಜ್ವಲಾ ಕೃಷ್ಣಾ ನಳಿನಲೋಚನಾ
ಪ್ರಣಯವಾರಿಧೇ ಕೃಷ್ಣಾ ಗುಣಗಣಾಕರಾ ದಾಮಸೋದರಾ ಕೃಷ್ಣಾ ದೀನವತ್ಸಲಾ ||
ಕಾಮಸುಂದರಾ ಕೃಷ್ಣಾ ಪಾಹಿ ಸರ್ವದಾ ನರಕನಾಶನಾ ಕೃಷ್ಣಾ ನರಸಹಾಯಕಾದೇವಕೀಸುತಾ
ಕೃಷ್ಣಾ ಕಾರುಣ್ಯಾಂಬುಧೇ ಕಂಸನಾಶನಾ ಕೃಷ್ಣಾ ದ್ವಾರಕಾಸ್ಥಿತಾ ||

ಪಾವನಾತ್ಮಕಾ ಕೃಷ್ಣಾ ದೇಹಿ ಮಂಗಳಂ ತ್ವತ್ಪದಾಂಬುಜಂ ಕೃಷ್ಣಾ ಶ್ಯಾಮಕೋಮಲಂ
ಭಕ್ತವತ್ಸಲಾ ಕೃಷ್ಣಾ ಕಾಮ್ಯದಾಯಕಾ ಪಾಲಿಶನ್ನನೂ ಕೃಷ್ಣಾ ಶ್ರೀಹರೀ ನಮೋ ||
ಭಕ್ತದಾಸನಾ ಕೃಷ್ಣಾ ಹರಸುನೀ ಸದಾ ಕಾದುನಿಂತಿನಾ ಕೃಷ್ಣಾ ಸಲಹಯಾವಿಭೋ
ಗರುಡವಾಹನಾ ಕೃಷ್ಣಾ ಗೋಪಿಕಾಪತೇ ನಯನಮೋಹನಾ ಕೃಷ್ಣಾ ನೀರಜೇಕ್ಷಣಾ ||

ಇಂತಹ ಸುಂದರ ಸುಮನೋಹರ ತಾಣದಲ್ಲಿ ಕೃಷ್ಣನ ದರ್ಶನ ಭಾಗ್ಯವನ್ನು ಒದಗಿಸಿಕೊಟ್ಟ ಅಗಸ್ತ್ಯ ಮಹಾಋಷಿಗಳು, ಸುಮಾರು ಒಂಬತ್ತು ಶತಮಾನಗಳ ಹಿಂದೆ ಇಲ್ಲಿ ದೇವಸ್ಥಾನದ ನಿರ್ಮಾಣ ಮಾಡಿದ ಪಾಳೇಗಾರನ ವಂಶದವರು, ನಿರ್ದಿಷ್ಟವಾಗಿ ದುಡ್ಡನ್ನು ನಿಗದಿ ಮಾಡದೇ ನಿಸ್ವಾರ್ಥವಾಗಿ ಬಂದವರ ಒಳಿತಿಗಾಗಿ ಪ್ರಾರ್ಥನೆ, ದಾಸೋಹ, ಪೂಜಾ ಕೈಂಕರ್ಯಗಳನ್ನು ನಡೆಸುತ್ತಿರುವ ಅರ್ಚಕ ವೃಂದ, ದೇವಾಲಯದ ಸಿಬ್ಬಂದಿ, ಅಂಗಡಿ, ವ್ಯಾಪಾರ, ಜಂಝಾಟಗಳಿಂದ ಈ ಪವಿತ್ರ ಸ್ಥಳವನ್ನು ಮುಕ್ತಗೊಳಿಸಿ ಸ್ವಚ್ಛತೆ ಕಾಪಾಡುತ್ತಿರುವ ಆಡಳಿತ ವೃಂದ,

**“ಎಂದರೋ ಮಹಾನುಭಾವುಲು ಅಂದರಿಕೀ ವಂದನಮುಲು”**

